ಸಾಕ್ಷಿಯನ್ನು ದಿಃ **19.11.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ ಎಲ್ ಕೆ ಜೆ ವಕೀಲರಿಂದಃ-**

ಎಂ ವಿ ಸಿ ನಂಬರ್ 757/2022 ರ ಅರ್ಜಿದಾರನಾದ ನನ್ನ ಮಗ ಹುಟ್ಟುವಾಗಲೆ ಅಂಗವಿಕಲ ಎಂದರೆ ಸರಿ. ಆ ದಿನ ಮರದೂರು ಗ್ರಾಮದಿಂದ ಹುಣಸೂರು ಮೂಲಕ ಚುಂಚನಕಟ್ಟೆಗೆ ಮದುವೆಗೆ ಹೋಗುತ್ತದೆ. ಮರದೂರು ಗ್ರಾಮದಿಂದ ಚುಂಚನಕಟ್ಟೆಗೆ ಹೋಗಲು ಮೂರು ಮಾರ್ಗಗಳು ಇವೆ ಎಂದರೆ ಸರಿ. ಮರದೂರಿನಿಂದ ಕಟ್ಟೆಮಳಲವಾಡಿಗೆ ಬಂದು ಅಲ್ಲಿಂದ ಚುಂಚನಕಟ್ಟೆಗೆ ಹೋಗಬಹುದು ಎಂದರೆ ಸರಿ. ಮರದೂರಿನಿಂದ ಕಿರಿಜಾಜಿ ಮಾರ್ಗವಾಗಿ ಚುಂಚನಕಟ್ಟೆಗೆ ಹೋಗಬಹುದು ಎಂದರೆ ಸರಿ. ಅಪಘಾತವು ಕಟ್ಟೆಮಳಲವಾಡಿ ಕ್ರಾಸ್ ನ ಮಾರಿಶಸ್ ಫ್ಯಾಕ್ಟರಿಯ ಸರ್ಕಲ್ ನಲ್ಲಿ ಆಗಿದೆ. ಸರ್ಕಲ್ ನಲ್ಲಿ 4 ರಸ್ತೆಗಳು ಸೇರುತ್ತವೆ ಎಂದರೆ ಸರಿ. ಸದರಿ ಸರ್ಕಲ್ ನಲ್ಲಿ ಹುಣಸುರು ಕಡೆಯಿಂದ ಹೋಗುವ ಮಾರ್ಗ ಮತ್ತು ಕೆ ಆರ್ ನಗರಕ್ಕೆ ಹೋಗುವ ಮಾರ್ಗದಲ್ಲಿ ರಸ್ತೆ ಹಂಪ್ಸ್ ಹಾಕಿದ್ದಾರೆ. ಎಂ ವಿ ಸಿ ನಂಬರ್ 757/2022 ರ ಅರ್ಜಿದಾರನಾದ ನನ್ನ ಮಗನಿಗೆ ಅಪಘಾತದ ಸಮಯದಲ್ಲಿ 10 ವರ್ಷ ವಯಸ್ಸಾಗಿತ್ತು. ಆ ದಿನ ನಾನು, ನನ್ನ ಪತ್ನಿ ಮತುತ ಮಗ ಒಂದೇ ಬೈಕ್ ನಲ್ಲಿ ಪ್ರಯಾಣಿಸುತ್ತಿದ್ದೆವು.

ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾವು ಪ್ರಯಾಣಿಸುತ್ತಿದ್ದಾಗ ನನ್ನ ಮಗನನ್ನು ನನ್ನ ಮುಂದೆ ಕೂರಿಸಿ ಅವನು ಮಾಡಿದ ತಪ್ಪಿನಿಂದ ನಾನು ಬೈಕ್ ನ್ನು ವೇಗವಾಗಿ ಚಲಾಯಿಸಿದ ಪರಿಣಾಮ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಂಪ್ಸ್ ನಿಂದ ಹಿಂದೆ ರಸ್ತೆ ಎಡಭಾಗದಲ್ಲಿ ಹೋಗುತ್ತಿದ್ದಾಗ ಬಲ ಭಾಗದಿಂದ ಬಂದು ಡಿಕ್ಕಿ ಪಡಿಸಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ಕೆ ಆರ್ ನಗರ ಕಡೆಯಿಂದ ಹುಣಸೂರು ಕಡೆಗೆ ಬರುತ್ತಿದ್ದರು. 1 ನೇ ಎದುರುದಾರರು 2 ಹಂಪ್ಸ್ ಗಳನ್ನು ದಾಟಿ ನನ್ನ ಹತ್ತಿರ ಬಂದಿದ್ದರು ಎಂದರೆ ಸರಿ. 1 ನೇ ಎದುರುದಾರರು 2 ಹಂಪ್ಸ್ ಗಳನ್ನು ದಾಟಿ ಅವರು ಬರುತ್ತಿದ್ದ ರಸ್ತೆಯ ಎಡ ಭಾಗದಲ್ಲಿ ನಿಧಾನವಾಗಿ ಬರುತ್ತಿದ್ದಾಗ ನಾನು ಹಂಪ್ಸ್ ನ್ನು ಗಮನಿಸದೇ ವೇಗವಾಗಿ ಬಂದು ಹಂಪ್ಸ್ ನ ಮೇಲೆ ವಾಹನವನ್ನು ಹಾರಿಸಿದ ಕಾರಣ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾವು

ಬಿದ್ದ ತಕ್ಷಣ 1 ನೇ ಎದುರುದಾರರು ಬಂದು ಉಪಚರಿಸಿ ಯಾವುದೋ ವಾಹನದಲ್ಲಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು ಎಂದರೆ ಸರಿಯಲ್ಲ. ನನ್ನ ಸ್ವತಃ ತಪ್ಪಿನಿಂದ ಆದ ಅಪಘಾತದಿಂದ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನಮ್ಮನ್ನು ಉಪಚರಿಸಿದ 1 ನೇ ಎದುರುದಾರರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ಔಷಧಿಗಾಗಿ ನನಗೆ ರೂ **45** ಸಾವಿರ ಮತ್ತು ಮಗನಿಗಾಗಿ ರೂ **1** ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ಅಷ್ಟೊಂದು ಖರ್ಚು ಮಾಡಿದ್ದೇನೆ ಎಂದು ತೋರಿಸಲು ಯವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಆದ ಅಪಘಾತಕ್ಕೆ 1 ನೇ ಎದುರುದಾರರಿಂದ ಹೆಚ್ಚಿನ ಪರಿಹಾರವನ್ನು ಪಡೆಯಬೇಕೆಂದು ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಸುಳ್ಳು ಅರ್ಜಿ ಸಲ್ಲಿಸಿ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಸಿ ವಿ ಎಸ್ ವಕೀಲರಿಂದಃ–**

2 ನೇ ಎದುರುದಾರರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನಗೀಗ 51 ವರ್ಷ ವಯಸ್ಸು, ನನಗೆ 18 ವರ್ಷಯಿದ್ದಾಗಿನಿಂದಲೂ ದ್ವಿ ಚಕ್ರವಾಹನವನ್ನು ಚಲಾಯಿಸುತ್ತಿದ್ದೇನೆ. ನನ್ನ ಬಳಿ ಡಿ ಎಲ್ ಇದೆ. ಅಪಘಾತದ ಸಮಯದಲ್ಲಿ ನನ್ನ ಬಳಿ ಡಿ ಎಲ್ ಇತ್ತು. ನನ್ನ ಡಿ ಎಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನಗೆ ವ್ಯವಸಾಯದಿಂದ ಮಾಸಿಕ ರೂ 25 ಸಾವಿರ ಆದಾಯ ಇದೆ ಎಂದು ತೋರಿಸಲು ನಿರ್ದಿಷ್ಟ ದಾಖಲೆ ಇಲ್ಲ. ನಾನು ಓಡಿಸುತ್ತಿದ್ದ ಬೈಕಿನ ಮಾಲೀಕ ನಾನೆ. ನನ್ನ ಬೈಕಿನ ಸಂಖ್ಯೆ ಕೆಎ–45–932. ನಾನು ಸದರಿ ಬೈಕಿನ ಮಾಲೀಕ ಎಂದು ತೋರಿಸಲು ಆರ್ ಸಿ ಪುಸ್ತಕವನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸುತ್ತೇನೆ. ಅಪಘಾತದ ದಿನದಂದದು ನನ್ನ ಬೈಕಿನ ವಿಮೆ ಚಾಲ್ತಿಯಲ್ಲಿತ್ತು. ನಾನು ನನ್ನ ಮಗನನ್ನು ನನ್ನ ಮುಂಭಾಗ ಕುಳ್ಳಿರಿಸಿದ್ದೆ. ಬೈಕಿನಲ್ಲಿ ಇಬ್ಬರು ಪ್ರಯಾಣಿಸಬಹುದು. ಒಂದು ಎರಡು ವಯಸ್ಸಿನ

ಮಕ್ಕಳನ್ನು ಕೂರಿಸಿದರೆ ಯಾವುದೇ ಶ್ರಮ ಉಂಟಾಗುವುದಿಲ್ಲ. ನಾವು ಮೂರು ಜನ ಪ್ರಯಾಣಿಸುತ್ತಿದ್ದೆವು. ಸಾಮಾನ್ಯವಾಗಿ ಮಕ್ಕಳನ್ನು ಕೂರಿಸಿದರೆ ಸವಾರನ ಮುಖದ ಎತ್ತರಕ್ಕೆ ಮಗು ಬರುತ್ತದೆ ಎಂದರೆ ಸರಿ. ಆ ಕಾರಣದಿಂದ ಮುಂಭಾಗ ಏನು ಬರುತ್ತದೆ ಎಂದು ನೋಡುವ ಅವಕಾಶ ಇರುವುದಿಲ್ಲ ಎಂದರೆ ಸರಿ.

ಮೂರು ಜನ ಬೈಕಿನಲ್ಲಿ ಪ್ರಯಾಣಿಸಬಾರದು ಎಂಬ ವಿಷಯ ನನಗೆ ಗೊತ್ತಿಲ್ಲ. ಬೈಕಿನಲ್ಲಿ ಇಬ್ಬರು ಪ್ರಯಾಣಿಸಬಹುದು ಎಂಬ ವಿಚಾರ ನನಗೆ ಗೊತ್ತು. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿದ್ದೆ. ಪೊಲೀಸರು ನನ್ನ ಬೈಕ್ ನ್ನು ಅಮಾನತ್ತುಪಡಿಸಿಕೊಂಡರು. ಹೆಲ್ಮೆಟ್ ಚೂರುಚೂರು ಆಗಿತ್ತು. ನನ್ನ ಹೆಲ್ಮೆಟ್ ನಲ್ಲಿ ಐ ಎಸ್ ಐ ಮಾರ್ಕ್ ಇತ್ತು. ಹೆಲ್ಮೆಟ್ ಒಡೆದು ಚೂರಾಗಿದ್ದಲ್ಲಿ ಆ ಬಗ್ಗೆ ಮಹಜರಿನಲ್ಲಿ ಪೊಲೀಸರು ಬರೆಯುತ್ತಿದ್ದರು ಎಂದರೆ ಸರಿ. ಮಹಜರಿನಲ್ಲಿ ಹೆಲ್ಮೆಟ್ ಬಗ್ಗೆ ಬರೆದಿರುವುದನ್ನು ನೀವೂ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ನನಗೆ ಕಾಲು, ಕೈ ಮತ್ತು ತಲೆಗೆ ಏಟಾಗಿತ್ತು. ಹೆಲ್ಮೆಟ್ ಧರಿಸಿದ್ದಲ್ಲಿ ತಲೆಗೆ ಏಟಾಗುತ್ತಿರಲಿಲ್ಲ ಎಂದರೆ ಹೆಲ್ಮೆಟ್ ಹಾರಿ ಹೋಗಿದ್ದರಿಂದ ಏಟಾಗಿದೆ. ಮಹಜರಿನಲ್ಲಿ ಪೊಲೀಸರು ಹೆಲ್ಮೆಟ್ ಚೂರಾದ ಬಗ್ಗೆ ಬರೆಯದೇ ಇದ್ದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಧರಿಸಿದ್ದೆ. ನಾನು ಹೆಲ್ಮೆಟ್ ಧರಿಸದೇ ಇದ್ದರೂ ಕೂಡ ಧರಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಂಭಾಗದಲ್ಲಿ ಮಗನನ್ನು ಕೂರಿಸಿದ ಕಾರಣ ರಸ್ತೆಯಲ್ಲಿ ಏನೆಲ್ಲಾ ಬರುತ್ತಿದೆ ಎಂದು ನನಗೆ ಗೊತ್ತಾಗದೆ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಎದುರುದಾರರ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳಿದರೆ ಪರಿಹಾರ ಸಿಗುತ್ತದೆ ಎಂಬ ಕಾರಣಕ್ಕಾಗಿ ನಾನು ಸುಳ್ಳು ದೂರನ್ನು ಎದುರುದಾರರ ವಿರುದ್ಧ ನೀಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಪರಿಚಿತರಲ್ಲ. ಪೊಲೀಸರು ಕ್ರಿಮಿನಲ್ ಪ್ರಕರಣದಲ್ಲಿ ದಾಖಲಿಸಿದ ಐ ಎಂ ವಿ ವರದಿಯ ಬಗ್ಗೆ ತಿಳಿದುಕೊಂಡಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ನಾನು ಹಣ ಕೊಟ್ಟು ನನ್ನ ಸೂಚನೆಯ ಮೇರೆಗೆ ಅವರು ನ್ಯಾಯಾಲಯದ ಮುಂದೆ ತಪ್ಪೊಪ್ಪಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರ ಬಳಿ ಚಾಲನಾ ಪತ್ರ ಇರಲಿಲ್ಲ ಎಂದರೆ ಇತ್ತು. 3 ನೇ

ಎದುರುದಾರರನ್ನು ಯಾವ ಆಧಾರದ ಮೇಲೆ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದು ಗೊತ್ತಿಲ್ಲ. ಅಪಘಾತಪಡಿಸಿದ ವಾಹನ ಯಾರಿಗೆ ಸೇರಿದೆ ಎಂದು ತೋರಿಸುವ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. 3 ನೇ ಎದುರುದಾರರು 2 ನೇ ಎದುರುದಾರರಿಗೆ ವಿಮೆ ವಿತರಿಸಿದ್ದಾರೆ ಎಂದು ತೋರಿಸುವ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

ನಾನು ಚಿಕಿತ್ಸೆ ಪಡೆದು ಸುಮಾರು 6-7 ವರ್ಷವಾಗಿದೆ. ನಾನು ಚಿಕಿತ್ಸೆಗೆ ಮತ್ತು ಸಾರಿಗೆಗೆ ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಇಲ್ಲ. ನಾನು ವ್ಯವಸಾಯ ಮಾಡುತ್ತೇನೆ. ಅಪಘಾತದಿಂದ ನನಗೆ ರೂ 2 ½ ಲಕ್ಷ ನಷ್ಟ ಉಂಟಾಗಿದೆ ಎಂದು ತೋರಿಸಲು ದಾಖಲೆ ಇಲ್ಲ. 3 ನೇ ಎದುರುದಾರರಿಂದ ಸುಲಭವಾಗಿ ಪರಿಹಾರ ಪಡೆಯಬಹುದೆಂದು ಪೊಲೀಸರ ಜೊತೆ ಮತ್ತು 1 ನೇ ಎದುರುದಾರರ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮೂರು ಜನ ಬೈಕಿನಲ್ಲಿ ಪ್ರಯಾಣಿಸಿ ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ 3 ನೇ ಎದುರುದಾರರಿಂದ ಸುಲಭವಾಗಿ ಪರಿಹಾರ ಪಡೆಯಬಹುದೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರ ಬಳಿ ಬೈಕ್ ಚಲಾಯಿಸಲು ಯಾವುದೇ ಚಾಲನ ಪತ್ರ ಇರಲಿಲ್ಲ ಎಂದರೆ ಸರಿ. ಆದ್ದರಿಂದ 3 ನೇ ಎದುರುದಾರರು ನಮಗೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.